# SPECIMEN

ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು

**K-II** **2011** ಪ್ರಶ್ನೆ ಪುಸ್ತಿಕೆ ಶ್ರೇಣಿ **G**

## ಪ್ರಶ್ನೆ ಪುಸ್ತಿಕೆ

## ಸಾಮಾನ್ಯ ಕನ್ನಡ

ಗರಿಷ್ಠ ಸಮಯ : ಎರಡು ಘಂಟೆಗಳು ಗರಿಷ್ಠ ಅಂಕಗಳು : 150

### ಸೂಚನೆಗಳು

1. OMR ಉತ್ತರ ಹಾಳೆಯಲ್ಲಿ ಪ್ರಶ್ನೆ ಪತ್ರಿಕೆ ಶ್ರೇಣಿಯನ್ನು ಎನ್‌ಕೋಡ್ ಮಾಡುವ ಮೊದಲು ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. ಪ್ರಶ್ನೆ ಪುಸ್ತಿಕೆಯ ಶ್ರೇಣಿ **A, B, C, D ........** ಅಥವಾ **H** ಅನ್ನು **OMR** ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್‌ಕೋಡ್) ಗೊಳಿಸಬೇಕು.
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

ನೋಂದಣಿ ಸಂಖ್ಯೆ

4. ಈ ಪ್ರಶ್ನೆ ಪುಸ್ತಿಕೆ **100** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರ ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ***ಕೇವಲ ಒಂದು ಉತ್ತರವನ್ನು*** ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ***ಪ್ರತ್ಯೇಕ*** ಉತ್ತರ ಪತ್ರಿಕೆಯ ಮೇಲೆ ಕೇವಲ ಕಪ್ಪು ಅಥವಾ ನೀಲಿ ಶಾಯಿಯ **ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ** ಗುರುತು ಮಾಡಬೇಕು. **ಉತ್ತರ ಪತ್ರಿಕೆ ಹಾಳೆಯಲ್ಲಿನ ಸೂಚನೆಗಳನ್ನು ಗಮನಿಸುವುದು.**
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. ***ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿರಿ.*** ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಉತ್ತರ ಪತ್ರಿಕೆಯಲ್ಲಿ ಉತ್ತರಗಳನ್ನು ಗುರುತಿಸಲು ಪ್ರಾರಂಭಿಸುವ ಮೊದಲು ನೋಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್ ಇತ್ಯಾದಿಗಳನ್ನು (ನಿಮ್ಮ ಸಹಿ ಹಾಗೂ ಸಂವೀಕ್ಷಕರ ಸಹಿಯೊಂದಿಗೆ) ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿ/ಗುರುತು ಮಾಡಿರಿ.
8. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವುದೇ ರೀತಿಯ ಗುರುತನ್ನೂ ಮಾಡತಕ್ಕದ್ದಲ್ಲ.
9. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆಯ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಪತ್ರಿಕೆಯ ಹಾಳೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
10. ಯಾವುದೇ ರೀತಿಯ ಕ್ಯಾಲ್‌ಕ್ಯುಲೇಟರ್‌ಗಳನ್ನು ಬಳಸಲು ಅನುಮತಿಸುವುದಿಲ್ಲ.
11. ಉತ್ತರ ಪತ್ರಿಕೆಯಲ್ಲಿ ಕಂಡು ಬರುವ ಬಾರ್‌ಕೋಡ್‌ಗಳ ಮೇಲೆ ಯಾವುದೇ ಗುರುತು ಮಾಡತಕ್ಕದ್ದಲ್ಲ.

ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು

www.shikarat.com

ಸೂಚನೆ : ಸೂಕ್ತ ಉತ್ತರವನ್ನು ಗುರಿತಿಸಿರಿ. (ಪ್ರಶ್ನೆಸಂಖ್ಯೆ 1 – 6)

1. ಭರತೇಶ ವೈಭವವು ಎಂಥಹ ಕಾವ್ಯ
   (1) ಶೃಂಗಾರ ಕಾವ್ಯ
   (2) ಹಾಸ್ಯ ಕಾವ್ಯ
   (3) ಸಾಂಗತ್ಯ ಕಾವ್ಯ
   (4) ಮಹಾ ಕಾವ್ಯ

2. ಭಾರತೀಯ ಕಾವ್ಯಮೀಮಾಂಸೆಗೆ ಬಂದ ಪ್ರಶಸ್ತಿ
   (1) ಜ್ಞಾನಪೀಠ ಪ್ರಶಸ್ತಿ
   (2) ಪಂಪ ಪ್ರಶಸ್ತಿ
   (3) ಕನ್ನಡಸಾಹಿತ್ಯ ಅಕಾಡೆಮಿ
   (4) ಕೇಂದ್ರೀಯ ಸಾಹಿತ್ಯ ಅಕಾಡೆಮಿ

3. 'ಮೈಸೂರು ಮಲ್ಲಿಗೆ' ಯ ಕರ್ತೃ
   (1) ಬೇಂದ್ರೆ
   (2) ಪುತಿನ
   (3) ಕೆ.ಎಸ್.ಎನ್.
   (4) ಕುವೆಂಪು

4. ಇವುಗಳಲ್ಲಿ ಗೊರೂರರವರ ಕೃತಿಯನ್ನು ಗುರುತಿಸಿರಿ
   (1) ಆಕಾಶದೀಪ
   (2) ಹೇಮಾವತಿ
   (3) ಕಲ್ಯಾಣಸ್ವಾಮಿ
   (4) ಬೆಕ್ಕಿನ ಕಣ್ಣು

5. 'ದೃಶ್ಯಕಾವ್ಯ' – ಈ ಪರ್ಯಾಯನಾಮ ಸಾಹಿತ್ಯದ ಯಾವ ಪ್ರಕಾರದ್ದು.
   (1) ಕಾದಂಬರಿ
   (2) ಸಣ್ಣಕತೆ
   (3) ಪ್ರಬಂಧ
   (4) ನಾಟಕ

6. ಕುವೆಂಪುರವರಿಗೆ ಜ್ಞಾನಪೀಠ ಪ್ರಶಸ್ತಿ ತಂದ ಕೃತಿ ಯಾವುದು
   (1) ರಾಮಾಯಣ ದರ್ಶನಂ
   (2) ಕಾನೂರು ಹೆಗ್ಗಡತಿ
   (3) ರಕ್ತಾಕ್ಷಿ
   (4) ನಾಕುತಂತಿ

ಸೂಚನೆ : ಕೆಳಗಿನ ವಾಕ್ಯಗಳಲ್ಲಿ ಪದಗಳು ಕ್ರಮಬದ್ಧವಾಗಿಲ್ಲ. ಗೆರೆ ಎಳೆದು ಸೂಚಿಸಿರುವ ಭಾಗಗಳನ್ನು ಹೊಂದಿಸಿ ಅವುಗಳ ಅನುಕ್ರಮಗಳನ್ನು ಗುರುತಿರಿಸಿ. (ಪ್ರಶ್ನೆಸಂಖ್ಯೆ 7 – 11)

ಉದಾ :

ನೋಡಿ, (P) ದುರುಗುಟ್ಟಿ (Q) ಸುಟ್ಟುರಿಯುವಂತೆ (R) ದೌಡಾಯಿಸಿದಳು (S)

(1) QRPS
(2) RSPQ
(3) RQPS
(4) RPQS

ಇಲ್ಲಿ QRPS ಎಂಬುದು ಸರಿಯಾದ ಕ್ರಮ. ಆದುದರಿಂದ ಇಲ್ಲಿ (1) ಅನ್ನು ಗುರುತಿಸಬೇಕು.

7. ಮನುಷ್ಯ (P) ಬೆಲೆ ಕಟ್ಟುವುದು ಸಂಪ್ರದಾಯ (Q) ಮಾನವೀಯ (R) ಅನುಕಂಪದ ಮೌಲ್ಯಾದರ್ಶಗಳಿಗೆ (S)
   (1) SRPQ
   (2) PSRQ
   (3) QSRP
   (4) RSPQ

8. ಮಟ್ಟ ಕುಸಿಯುತ್ತಿದೆ (P) ಭಾಷಾಕಲಿಕೆಯ (Q) ವಿದ್ಯಾರ್ಥಿಗಳಲ್ಲಿ (R) ಇಂದಿನ (S)
   (1) RPQS
   (2) PQRS
   (3) QPRS
   (4) SRQP



www.shikarat.com
SPECIMEN

9. ಮನೋನಿಶ್ಚಯದಂತೆ, (P) ಹಠದಪಟ್ಟನ್ನು ಸಡಿಲಿಸದೆ (Q) ಅಪೂರ್ವ ಕುಶಲತೆಯನ್ನು, (R) ತೋರಿದ ಪ್ರತಿಭಾವಂತನೀತ (S)

(1) QPRS
(2) PQRS
(3) RQSP
(4) PRQS

10. ಅಂಗವಿಕಲ (P) ಶಿಕ್ಷಕರು, (Q) ವಿದ್ಯಾರ್ಥಿಗಳಿಗೆ ಪಾಠ ಹೇಳಲು, (R) ಸಿದ್ಧರಾದರು (S)

(1) QPRS
(2) PQRS
(3) SRQP
(4) RPQS

11. ಮಂಗಳೂರಿಗೆ (P) ನೆನ್ನೆ (Q) ಹೋದನು (R) ಸ್ವರೂಪ (S)

(1) SQPR
(2) PRQS
(3) QSPR
(4) RPQS

ಸೂಚನೆ : ಈ ಕೆಳಗೆ ಕೊಡಲಾದ ಆರು ವಾಕ್ಯಗಳುಳ್ಳ ಭಾಗಗಳಲ್ಲಿ ಒಂದು ಮತ್ತು ಆರನೇ ವಾಕ್ಯಗಳು ಸರಿಯಾದ ರೀತಿಯಲ್ಲಿವೆ. ನಡುವಿನ ನಾಲ್ಕು ವಾಕ್ಯಗಳು **(PQRS)** ಜಾಗ ಬದಲಾಯಿಸಿವೆ. ಅವುಗಳನ್ನು ಅರ್ಥ ಬರುವಂತೆ ಸರಿಯಾಗಿ ಹೊಂದಿಸಿ ಉತ್ತರ ಯಾವುದು ಎಂಬುದನ್ನು ಗುರುತಿಸಬೇಕು. **(ಪ್ರಶ್ನೆಸಂಖ್ಯೆ 12 – 16)**

ಉದಾ :

1. 1893 ರಲ್ಲಿ ಒಮ್ಮೆ ಸ್ವಾಮಿ ವಿವೇಕಾನಂದರು ಪ್ಯಾರಿಸ್ ನಿಂದ ಗ್ರಾಮವೊಂದಕ್ಕೆ ಹೊರಟಿದ್ದರು.

P. ಕುದುರೆ ಗಾಡಿಯ ಚಾಲಕ, ಕೆಳಗಿಳಿದು ತನ್ನ ಮಕ್ಕಳನ್ನು ಮುದ್ದಾಡಿ ಮುಂದೆ ಸಾಗುತ್ತಾನೆ.

Q. ಹಿಂದೆ ಮಳುಗಿಹೋಗಿದ್ದ ಬ್ಯಾಂಕನ್ನು ಕಟ್ಟಿ ಮತ್ತೆ ಮಾಲೀಕನಾಗುವ ಹಿರಿಯಾಸೆ ಚಾಲಕನಿಗಿತ್ತು.

R. ಈಗ ಸಂಸಾರ ಸಾಗಿಸಲು, ಸಾಲತೀರಿಸಲು ಚಾಲಕ ವೃತ್ತಿಯನ್ನು ಅವಲಂಬಿಸಿದ್ದ.

S. ಚಾಲಕನ ಪೂರ್ವ ಚರಿತ್ರೆ ಕೇಳಿದ ವಿವೇಕಾನಂದರು ಅತೀವ ಆನಂದಪಟ್ಟು.

6. "ಈ ವ್ಯಕ್ತಿ ಒಬ್ಬ ವ್ಯಾವಹಾರಿಕ ವೇದಾಂತಿ" ಎಂದು ಮೆಚ್ಚಿಕೊಂಡರು ಕೆಳಕ್ಕೆ ಉರುಳಿದರೂ ಸನ್ನಿವೇಶಕ್ಕೆ ಬಲಿಯಾಗ ಬಾರದು, ಅಲ್ಲವೆ ?

(1) PQRS
(2) QPSR
(3) RQSP
(4) SPRQ

ಈ ಉದಾಹರಣೆಯಲ್ಲಿ PQRS ಎಂಬುದು ಸರಿಯಾದ ವಾಕ್ಯ ಹೊಂದಾಣಿಕೆ ಕ್ರಮವಾಗಿದೆ. ಆದ್ದರಿಂದ ಇಲ್ಲಿ (1) ಅನ್ನು ಗುರುತಿಸಬೇಕು.

www.shikarat.com

12. 1. ಪಾಟಲೀಪುತ್ರದ ಮಹಾರಾಜ ಸರ್ವಾರ್ಥ ಸಿದ್ಧಿ.

P. ಈ ಮೌರ್ಯನಿಗೆ ಚಂದ್ರಗುಪ್ತಾದಿ ನೂರುಜನ ಅಸಹಾಯ ಶೂರ ಗಂಡು ಮಕ್ಕಳು. ಇವರೇ ಮೌರ್ಯರು.

Q. ಮೌರ್ಯರು ಮುಂದೆ ತಮಗೆ ಕಂಟಕ ಪ್ರಾಯ ರಾದಾರೆಂಬ ಭಾವನೆಯಿಂದ ನವನಂದರು ಮೌರ್ಯರನ್ನು ನೆಲಮಾಳಿಗೆಯಲ್ಲಿರಿಸಿ ಕೊಲ್ಲಲೆಳಸಿದರು.

R. ಈತನಿಗೆ ಮುರಾದೇವಿ ಎಂಬವಳಲ್ಲಿ ಹುಟ್ಟಿದ ಮಗ ಮೌರ್ಯ.

S. ಸರ್ವಾರ್ಥಸಿದ್ಧಿಯ ಪಟ್ಟಮಹಿಷಿ ಸುನಂದಾ ದೇವಿಯಲ್ಲಿ ಒಂಬತ್ತು ಗಂಡು ಮಕ್ಕಳು; ಇವರೇ ನವನಂದರು.

6. ಮೌರ್ಯ ಮತ್ತು ಅವರ ಮಕ್ಕಳ ಒಪ್ಪಂದದಿಂದ ಚಂದ್ರಗುಪ್ತನೊಬ್ಬ ಮಾತ್ರ ಬದುಕುಳಿದ.

(1) PQRS (2) RPSQ
(3) QPSR (4) RQPS

13. 1. ಸೋಮವಂಶದ 'ಪ್ರತಿಮ' ಎಂಬ ರಾಜನ ಹಿರಿಯ ಪುತ್ರ 'ಶಂತನು' ಮಹಾರಾಜ ಮಹಾಭಾರತದ ಒಂದು ಪ್ರಸಂಗ.

P. ನನ್ನ ಮಗಳಿಗೆ ಹುಟ್ಟಿದ ಮಗನಿಗೆ ರಾಜ್ಯದ ಒಡೆತನ ಬರಬೇಕು, ಎಂದ ದಾಶರಾಜ.

Q. ಒಮ್ಮೆ ಬೇಟೆಗೆ ಹೋಗಿದ್ದ 'ಶಂತನು' ಮಹಾರಾಜ, ಸುಂದರಿಯೊಬ್ಬಳನ್ನು ಕಂಡು, ಅವಳ ತಂದೆಯನ್ನು ಬೇಡಿಕೊಂಡ.

R. ಹಕ್ಕುದಾರ ಪುತ್ರನಿರುವಾಗ ಈ ಒಪ್ಪಂದಕ್ಕೆ ಹೆದರಿ, ಕೊರಗಿ ಕೊರಗಿ, ಸೊರಗುತ್ತಿದ್ದ, ಶಂತನು ರಾಜ.

S. ಆಜನ್ಮ ಬ್ರಹ್ಮಚರ್ಯವನ್ನೇ ತಬ್ಬಿ, ಒಪ್ಪಂದಕ್ಕೆ ಒಪ್ಪಿ, ಸತ್ಯವತಿಯನ್ನು ತನ್ನ ತಾಯಿಯ ಸ್ಥಾನಕ್ಕೆ ಏರಿಸುತ್ತಾನೆ, ಪ್ರತಿಜ್ಞಾರೂಢ ಪುತ್ರ ಗಾಂಗೇಯ.

6. ಹೀಗೆ ಉನ್ನತೋನ್ನತ ಪಿತೃಭಕ್ತಿಯನ್ನು ಮೆರೆಯುತ್ತಾನೆ ಭೀಷ್ಮ .

(1) RPSQ (2) SRQP
(3) QPRS (4) PRQS

14. 1. ಒಂದು ಊರಿನಲ್ಲಿ ಚಿಪ್ಪಿಗ (ದರ್ಜಿ) ನೊಬ್ಬ ವಾಸವಾಗಿದ್ದ, ಆತ ಯಾವಾಗಲೂ.

P. ಕಿಟಕಿಯ ಹತ್ತಿರ ಕೂತು ಬಟ್ಟೆ ಹೊಲಿಯುತ್ತಿದ್ದ.

Q. ಒಂದುದಿನ ಬೇಸತ್ತ ಚಿಪ್ಪಿಗ ಸೂಜಿಯಿಂದ ಸೊಂಡಿಲನ್ನು ಚುಚ್ಚಿದ.

R. ಕೆರೆಗೆ ಹೋಗುತ್ತಿದ್ದ ಆನೆಯೊಂದು ಸೊಂಡಲಿನಿಂದ ಅವನನ್ನು ಆಶೀರ್ವಾದಿಸಿದಾಗ, ಆತ ಪ್ರತಿಯಾಗಿ ಪ್ರೀತಿಯಿಂದ ಬಾಳೆ ಹಣ್ಣು, ತಿನ್ನಿಸುತ್ತಿದ್ದ.

S. ಆಗ ಮೌನದಿಂದ ಹೆಜ್ಜೆಯಿಟ್ಟ ಆನೆ, ಎರಡು ಕೊಡ ಕೆಸರು ನೀರನ್ನು ತಂದು, ಅವನ ತಲೆಯ ಮೇಲೆ ಸುರಿದು ಬಿಟ್ಟಿತು.

6. — "ಪ್ರಾಣಿಗಳಿಗೂ ಆತ್ಮಾಭಿಮಾನ ಇರುವುದು ಸಹಜವಲ್ಲವೆ".

(1) QSPR (2) QRPS
(3) PRQS (4) PQSR

15. 1. ಕಲ್ಮಾಡಿ ನಮ್ಮ ಸುತ್ತಿಗೆ ದೊಡ್ಡ ಹಳ್ಳಿ.

P. ಈ ಕಲ್ಮಾಡಿ ಮಾರಿಗೆ ಕುರಿ, ಆಡು, ಕೋಳಿ ಸಾಲದೆ ಕೋಣವೇ ಬೇಕಾಗುತ್ತಿತ್ತು.

Q. ಮಾರಿಯ ಮೂರ್ತಿಗಳಲ್ಲಿ ಈ ಹಳ್ಳಿಯ ಮೂರ್ತಿ ಬಲು ಪ್ರಸಿದ್ಧ, ಬಲು ಭಯಂಕರ.

R. ಹಿಂದೆಲ್ಲ ಬಲಿಕೊಡುತ್ತಿದ್ದ ಶಕ್ತಿಶಾಲಿ ಮುನಿಯನ ಒಂದೇ ಹೊಡೆತಕ್ಕೆ ಕೋಣನ ರುಂಡ ಉರುಳಿ ಬೀಳುತ್ತಿತ್ತು.

S. ಕೊನೆಗೊಂದು ದಿನ ತಾನು ಸಾಕಿ ಬೆಳೆಸಿದ ಕೋಣವನ್ನು ಬಲಿ ಕೊಡಬೇಕಾದಾಗ ಮುನಿಯಿನ ಕರುಳು ಕಿತ್ತುಬಂದ ಸಂಕಟ ಕಾಡುತ್ತಿತ್ತು.

6. ಹೀಗೆ ಜೀವದಾಳವೆಸೆದು ಸಾವಿನ-ಗರವನ್ನು ನಡೆಸಲಾಗಿತ್ತು.

(1) SQRP (2) RSQP
(3) QRSP (4) PQRS

www.shikarat.com

16. 1. ಜಾನಪದ ಕತೆಯ ಒಂದು ಪ್ರಸಂಗ.

P. ರೈತನೊಬ್ಬನಿಗೆ ದಿವಸ ದಿವಸ 'ರಾಗಿಮುದ್ದೆ' ತಿಂದು ಬೇಸರ ವಾಯಿತು.

Q. ದಾರಿಯಲ್ಲಿ ಹೆಂಡತಿ ಕೊಟ್ಟ ರಾಗಿರೊಟ್ಟಿಯನ್ನು ತಿಂದು ಅತ್ತೆಮನೆ ಸೇರಿದ.

R. ಒಳ್ಳೆಯ ರುಚಿರುಚಿಯ ಊಟದ ಆಸೆಯಿಂದ ಅತ್ತೆಮನೆಗೆ ಹೊರಟ.

S. ಮನೆಗೆ ಬಂದ ಅಳಿಯನಿಗೆ ಸಂಭ್ರಮದಿಂದ 'ರಾಗಿ ಸೇವಿಗೆ' ಮಾಡಿ ಅತ್ತೆಬಡಿಸಿದಳು.

6. ಜಾಣ ರೈತ ಹಾಡಿಕೊಂಡು ಮನೆಯಲ್ಲಿದ್ರೆ ಲಿಂಗಾಕಾರ ಪ್ರಯಾಣದಲ್ಲಿ ಚಕ್ರಾಕಾರ ಇಲ್ಲಿಗೂ ಬಂದ್ಯಾ ಜಡೆಶಂಕರ ಎಂದ.

ಪಡೆದಷ್ಟನ್ನು ಅನುಭವಿಸಲೇ ಬೇಕು, ಅಲ್ಲವೆ.

(1) RSQP

(2) QPSR

(3) PRQS

(4) RPQS

**ಸೂಚನೆ : ಕೆಳಗೆ ಕೊಡಲಾದ ಗಾದೆಗಳ ಅರ್ಥವನ್ನು ಗ್ರಹಿಸಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಗುರುತಿಸಿರಿ. (ಪ್ರಶ್ನೆಸಂಖ್ಯೆ 17 – 21)**

17. ಗಾಳಿಬಂದಾಗ ತೂರಿಕೊ ಎಂದರೆ

(1) ತಾನಾಗಿ ಬಂದ ಸುಖ ಸಂಪತ್ತನ್ನು ದೂರ ಮಾಡಬೇಡ

(2) ಅವಕಾಶ ಒದಗಿದಾಗ ಕಾರ್ಯಸಾಧನೆ ಮಾಡು

(3) ಕಾಲ ನಮಗಾಗಿ ಕಾಯುವುದಿಲ್ಲ

(4) ನಾವು ಸಮಯವನ್ನು ಕಾಯುವುದುಲೇಸು

18. ತುಂಬಿದ ಕೊಡ ತುಳುಕುವುದಿಲ್ಲ ಎಂದರೆ

(1) ಅರ್ಧ ನೀರಿರುವ ಕೊಡ ಶಬ್ದಮಾಡುತ್ತದೆ

(2) ಅಲ್ಪ ವಿದ್ಯಾವಂತ ಗರ್ವದಿಂದ ವಿದ್ಯಾ ಪ್ರದರ್ಶನ ಮಾಡುತ್ತಾನೆ

(3) ತುಂಬಿದ ಕೊಡ ತುಳುಕುವುದೇ ಇಲ್ಲ

(4) ಪೂರ್ಣಜ್ಞಾನಿ ತನ್ನ ತೂಕ ಮತ್ತು ವ್ಯಕ್ತಿತ್ವವನ್ನು ಕಾಪಾಡಿ ಕೊಳ್ಳುತ್ತಾನೆ

19. ಕೊಡಲಿಯ ಕಾವು ಕುಲಕ್ಕೆ ಮೃತ್ಯು (ಕಾವು=ಹಿಡಿ)

(1) ಕೊಡಲಿಯ ಜೊತೆಗೂಡಿದ ಮರದಹಿಡಿ, ಮರಗಳ ವಂಶನಾಶಕ್ಕೆ ಸಹಾಯ ಮಾಡುತ್ತದೆ

(2) ಜೊತೆಗೂಡಿದ ವ್ಯಕ್ತಿಗಳು ಹಿತರೆನ್ನಿಸಿದರೂ ಎಚ್ಚರ ತಪ್ಪಬಾರದು

(3) ನಮ್ಮ ಒಳಗಿನ ದುರ್ಗುಣ ನಮ್ಮ ನಾಶಕ್ಕೆ ಕಾರಣ

(4) ಹಿತಶತ್ರುಗಳನ್ನು ದೂರವಿಡಬೇಕು

20. ಸೊಸೆಗೆ ಗೃಹ ಪ್ರವೇಶ, ಅತ್ತೆಗೆ ಪರವಾಸ

(1) ಮನೆಗೆ ಬಂದ ಸೊಸೆ, ನಾಳೆ ಅತ್ತೆಯಾಗುತ್ತಾಳೆ

(2) ಅತ್ತೆಗೆ, ಸೊಸೆಯಾಗಿ ಬಂದ ನೆನಪಿರಬೇಕು

(3) ಅತ್ತೆ – ಸೊಸೆಯರಲ್ಲಿ ಅನ್ಯೋನ್ಯತೆ ಅತ್ಯವಶ್ಯಕ

(4) ಸೊಸೆಗೆ ಅತ್ತೆಯ ಸ್ಥಾನ, ಅತ್ತೆಗೆ ಸೊಸೆಯ ಸ್ಥಾನ ಖಂಡಿತ

www.shikarat.com

21. ಮಾತೇ ಮುತ್ತು, ಮಾತೇ ಮೃತ್ಯು

(1) ಮಾತಿನಲ್ಲಿ ಮೆದುವಿರಬೇಕು

(2) ಮಾತು ಸಿಡಿಲಾಗಬಾರದು

(3) ಅಹಿತಕರ ಮಾತು ಅನರ್ಥಕ್ಕೆ ಕಾರಣ

(4) ಹಿತ-ಮಿತವಾದ ಮಾತಿನಿಂದ ಅನಿಷ್ಟ ದೂರ

**ಸೂಚನೆ : ಕೆಳಗೆ ಕೊಡಲಾಗಿರುವ ಶಬ್ದಗಳನ್ನು ಓದಿ ಸರಿಯಾದ ಅರ್ಥಗ್ರಹಿಸಿ, ಕೇಳಲಾದ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಗುರುತಿಸಿ. (ಪ್ರಶ್ನೆಸಂಖ್ಯೆ 22 – 26)**

22. "ಹೂಳು" – ಎಂದರೆ

(1) ಅಡಗಿಸು

(2) ಮುಚ್ಚಿಡು

(3) ಕೆಸರುಮಣ್ಣು

(4) ಇಂಗಿಸು

23. "ಊಟಿಸು" – ಎಂದರೆ

(1) ಹೋಗಲಾಡಿಸು

(2) ನಾಶ ಮಾಡು

(3) ಊಟ ಮಾಡಿಸು

(4) ನೀರು ಹರಿಯಿಸು

24. "ಇಂಗಳಗಣ್ಣ" – ಎಂದರೆ

(1) ಸುಡು ದೃಷ್ಟಿವುಳ್ಳ

(2) ಬೆಂಕಿಕಾರುವ ಕಣ್ಣಿನ

(3) ಶಿವನಕಣ್ಣು

(4) ಒಂದು ಬಗೆಯ ಮುಳ್ಳುಗಿಡ

25. "ಸ್ಥಾನಪಲ್ಲಟ" – ಎಂದರೆ

(1) ಬದಲಾಯಿಸು

(2) ಸ್ಥಳಾಂತರಮಾಡು

(3) ವರ್ಗಮಾಡು

(4) ಅಗೌರವಿಸು

26. "ಓಕುಳಿಯಾಡು" – ಎಂದರೆ

(1) ಸ್ನಾನಮಾಡಿಸು

(2) ನೀರುಚೆಲ್ಲು

(3) ಬಣ್ಣದ ನೀರು ಎರಚು

(4) ಆರತಿ ನೀರು ಸುರಿ

**ಸೂಚನೆ : ಈ ಕೆಳಗಿನ ಪ್ರಶ್ನೆಗಳ ಓದಿ, ಉತ್ತರವನ್ನು ಗುರಿತಿರಿಸಿ. (ಪ್ರಶ್ನೆಸಂಖ್ಯೆ 27 – 29)**

27. "ತ್ರಿಪದಿಯನ್ನು ಕನ್ನಡ ಜಾನಪದ ಗಾಯತ್ರಿ" – ಎಂದವರು ಯಾರು ?

(1) ಮಾಸ್ತಿ

(2) ಬೇಂದ್ರೆ

(3) ಸರ್ವಜ್ಞ

(4) ಹಾ.ಮ. ನಾಯಕ

28. 'ಷಟ್ಪದಿ' ಯಲ್ಲಿ ಎಷ್ಟುವಿಧ ?

(1) 8

(2) 4

(3) 6

(4) 10

29. ಖ್ಯಾತ ಕರ್ನಾಟಕ ವೃತ್ತಗಳು ಎಷ್ಟ ?

(1) 5

(2) 6

(3) 7

(4) 8

www.shikarat.com

**ಸೂಚನೆ : ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅರ್ಥಗ್ರಹಿಸಿ, ಕೇಳಲಾದ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಗುರುತಿಸಿರಿ. (ಪ್ರಶ್ನೆಸಂಖ್ಯೆ 30 – 36)**

ಮಹಾ ಕವಿ-ರನ್ನನ ಕಾಲ ಕ್ರಿ.ಶ. 949. ಈ ಶತಮಾನದಲ್ಲಿ ರತ್ನತ್ರಯರೆನಿಸಿದ ಪಂಪ, ಪೊನ್ನ, ರನ್ನ – ಈ ಮೂವರಲ್ಲಿ ಕೊನೆಯವನು ರನ್ನ. ವೀರ, ತ್ಯಾಗ, ದಾನ, ಗುಣಗಳನ್ನೇ ಬದುಕಿನ ಹಿರಿಯ ಮೌಲ್ಯಗಳೆಂದು ಸ್ವೀಕರಿಸಿದ್ದ ಯುಗ ಅದು. ಈ ಮೌಲ್ಯಗಳ ಉಳಿವು ಮತ್ತು ಉನ್ನತಿಗಾಗಿ ಶ್ರಮಿಸಿದವರು ಹಲವರು. ಈ ಮಹಾಮಹಿಮರ ಸಾಲಿನಲ್ಲಿ ದಾನಚಿಂತಾಮಣಿ ಎನ್ನಿಸಿಕೊಂಡ ಅತ್ತಿಮಬ್ಬೆಯ ಸ್ಥಾನ ಉನ್ನತವಾದದ್ದು. ರನ್ನ ಕವಿ ಅಜಿತನಾಥ ಪುರಾಣ ಕಾವ್ಯದಲ್ಲಿ ಅತ್ತಿಮಬ್ಬೆಯ ನಿರ್ಮಲ ಚರಿತ್ರೆಯನ್ನು ಅಮರಗೊಳಿಸಿದ್ದಾನೆ. ಅತ್ತಿಮಬ್ಬೆಯ ದಾನದ ಗುಣಗಾನ ಮಾಡುವ ಕವಿರನ್ನ, ಕವಿವರಕಾಮಧೇನು, ದಾನಗುಣೈ ಕಾಂಬುಧಿ ಎಂದು ಕರೆದಿದ್ದಾನೆ. ಕವಿಗಳು ಬೇಡಿದ ಸರ್ವಸ್ವವನ್ನು ಅವಳು ದಾನಮಾಡಿ ತೃಪ್ತಿಪಡುತ್ತಿದ್ದಳಂತೆ. ಹೀಗಾಗಿ ಅವಳು ಅವರ ಪಾಲಿನ ಕಾಮಧೇನುವಾಗಿದ್ದಳು. ಅವಳ ಜೈನ ಧರ್ಮದ ನಿಷ್ಠೆ ಅಪಾರವಾದದ್ದು. ಆ ಕಾಲಕ್ಕೆ ಅತ್ತಿಮಬ್ಬೆ ಜೈನಧರ್ಮದ ಪ್ರತೀಕ, ಧರ್ಮವನ್ನು ಬೆಳಗಿದ ದೀಪ ಎಂದೆಲ್ಲಾ ಹೆಸರು ಪಡೆದಿದ್ದವಳು. ಜೈನಧರ್ಮದ ಸಾರವನ್ನೇ ಮೈಗೂಡಿಸಿಕೊಂಡವಳು. ಮಹಾಸತಿ ಅತ್ತಿಮಬ್ಬೆ ದಂಡಾಪತಿ ಪಡೆವಲ ತೈಲನ ಜನನಿ ಮಾತ್ರವಲ್ಲ, ತೀರ್ಥಕರ 'ಜಿನನ ಜನನಿ' ಎನ್ನಿಸಿಕೊಂಡವಳು. ಜಿನನತಾಯಿ ಜಿನನನ್ನು ಗರ್ಭದಲ್ಲಿ ಧರಿಸಿ ಜನ್ಮಕೊಟ್ಟರೆ, ಅತ್ತಿಮಬ್ಬೆ ಜಿನನನ್ನು, ತನ್ನ ಮನಸ್ಸೆಂಬ ಗರ್ಭದಲ್ಲಿ ಸದಾಕಾಲವೂ ಧರಿಸಿಕೊಂಡು ಪೂಜಿಸುತ್ತಿದ್ದಳು. ಇದರಿಂದಾಗಿ ತೈಲನ ತಾಯಿಯೇ ಜಿನನ ತಾಯಿ ಎಂಬ ಕೀರ್ತಿಗೆ ಹೆಸರಾದವಳು. ಸುಮಾರು 1500 ಬಂಗಾರದ ಪ್ರತಿಮೆಗಳನ್ನು ಮಾಡಿಸಿ ದಾನ ಮಾಡಿ, ಧರ್ಮ ಪ್ರಚಾರಕಿ ಆದಳು. ಗೊಮ್ಮಟೇಶ್ವರನನ್ನು ದರ್ಶಿಸಲು ಪರ್ವತವನ್ನು ಏರಿ, ಉಪವಾಸ ವ್ರತ ಕೈಕೊಂಡವಳು ಅವಳು. ಮಾರ್ಗದ ಆಯಾಸ ಅವಳನ್ನೂ ಮೈದುಂಬಿದಾಗ, ಅಕಾಲ ವೃಷ್ಟಿ (ಮಳೆಗಾಲವಾಗದಿದ್ದರೂ) ಇದ್ದಕ್ಕಿದ್ದಂತೆ ಸುರಿದು ಆಯಾಸವನ್ನು ಕಳೆಯಿತಂತೆ. ಅವಳ ದೈವಭಕ್ತಿಯ ಮಹಿಮೆಗೆ ಇದು ಸಾಕ್ಷಿ. ಬುಧಜನವಂದಿತೆ, ಕವಿವರ ಕಾಮಧೇನು, ಜಿನ ಶಾಸನ ಜೋತಿ ಜಿನನ ತಾಯಿ ಎಂದು ಕರೆಸಿಕೊಂಡು, ಜೈನಧರ್ಮವನ್ನು ಬೆಳಗಿ ಮೋಕ್ಷಕ್ಕೆ ಹತ್ತಿರವಾದ ಪದವಿ (ಆಸನ್ನ ಭವ್ಯೆ) ಗಳಿಸಿಕೊಂಡ, ಸಾರ್ಥಕ ಬದುಕಿನ ಶ್ರೇಣಿಯಲ್ಲಿ ಉನ್ನತ ಸ್ಥಾನಪಡೆದವಳು ಅತ್ತಿಮಬ್ಬೆ.

**30.** ಹತ್ತನೆಯ ಶತಮಾನದ ಸಾಮಾಜಿಕ ಹಿರಿಯ ಮೌಲ್ಯ

(1) ಕ್ಷಾತ್ರಧರ್ಮ

(2) ದೇಶಪ್ರೇಮ

(3) ಭಕ್ತಿ ಭಾವ

(4) ವೀರ, ತ್ಯಾಗ, ದಾನ

**31.** ಕವಿವರ ಕಾಮಧೇನು – ಎಂದರೆ

(1) ಬೇಡಿದುದನ್ನು ಕೊಡುವ ಹಸು

(2) ಬೇಡಿದ ಪ್ರಜೆಗಳಿಗೆ ದಾನದ ಕೈ

(3) ಕವಿ ಶ್ರೇಷ್ಠರಿಗೆ ಗೌರವನೀಡಿ ದಾನಮಾಡುವ ಶ್ರೇಷ್ಠವ್ಯಕ್ತಿ

(4) ಕವಿಗಳಿಗೆ ಶ್ರೇಷ್ಠದಾನ ನೀಡಿ ಪ್ರೋತ್ಸಾಹಿಸಿದ ಅತ್ತಿಮಬ್ಬೆ

**32.** ಅತ್ತಿಮಬ್ಬೆ ಮಾಡಿಸಿದ ಜಿನ ಪ್ರತಿಮೆಗಳ ಸಂಖ್ಯೆ

(1) 2500

(2) 6000

(3) 1500

(4) 3000

www.shikarat.com

33. 'ಜಿನನ ತಾಯಿ' ಅತ್ತಿಮಬ್ಬೆ ಎನ್ನಲು ಕಾರಣ

(1) ಜಿನನ ಪಾದದಲ್ಲಿ ಇಟ್ಟಿದ ಭಕ್ತಿ

(2) ಮೋಕ್ಷಪದವಿಗೆ ಹತ್ತಿರವಾದದ್ದು

(3) ಮನಸ್ಸಿನ ಗರ್ಭದಲ್ಲಿಟ್ಟು ಜಿನನನ್ನು ಪೂಜಿಸಿದವಳು

(4) ಜೈನಧರ್ಮವನ್ನು ಬೆಳಗಿದವಳು

34. ಅತ್ತಿಮಬ್ಬೆ, ಪರ್ವತ ಏರುವಾಗ, ಪಥ ಶ್ರಮನಿವಾರಣೆಗೆ ನಡೆದ ಪವಾಡ

(1) ಪುಷ್ಪ ವೃಷ್ಟಿಯಾದದ್ದು

(2) ತಂಪು ಹಿಮವೃಷ್ಟಿ

(3) ಅಕಾಲವೃಷ್ಟಿಯಾದದ್ದು

(4) ಸಕಾಲವೃಷ್ಟಿಯಾದದ್ದು

35. ಜಿನಶಾಸನ ದೀಪಿಕೆ – ಎಂದರೆ

(1) ಜೈನಧರ್ಮವನ್ನು ಮೈಗೂಡಿಸಿಕೊಂಡವಳು

(2) ಭವ್ಯ ಜೀವನವನ್ನು ಬೆಳಗಿದವಳು

(3) ತತ್ವಗಳಿಂದ ಪರಿಶುದ್ಧಳಾದವಳು

(4) ಜೈನಧರ್ಮವನ್ನು ಪ್ರಕಾಶಗೊಳಿಸಿದವಳು

36. ರನ್ನಕವಿಗೆ ಆಶ್ರಯ ಕೊಟ್ಟವರು

(1) ಅಬ್ಬಲಬ್ಬೆ

(2) ಅತ್ತಿಮಬ್ಬೆ

(3) ಜಾಕಬ್ಬೆ

(4) ಹೊನ್ನಬ್ಬೆ

**ಸೂಚನೆ : ಖಾಲಿ ಜಾಗದಲ್ಲಿರಬೇಕಾದ ಸೂಕ್ತಪದವನ್ನು ಸಂಖ್ಯೆಯ ಮೂಲಕ ಗುರುತಿಸಿರಿ. (ಪ್ರಶ್ನೆಸಂಖ್ಯೆ 37 – 41)**

ಕನ್ನಡ ಭಾಷೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಆಡುವಂಥ ನಾಡಿನಲ್ಲಿ ಕನ್ನಡ ______ ಯಾಗ ಬೇಕಾದದ್ದು ಅತ್ಯವಶ್ಯಕ. ಕನ್ನಡಭಾಷೆ ______ ಮಾಧ್ಯಮವಾಗುವುದಾದರೆ, ಕನ್ನಡಿಗರಿಗೇ ನಾಡಿನ ಉದ್ಯೋಗ ಖಾತ್ರಿ. ಕನ್ನಡ ಮಾಧ್ಯಮ ಬಲವಂತದ ______ ವಾಗಬಾರದು. ಆಡಳಿತಗಾರರು ಈ ಯೋಜನೆಯನ್ನು ತರಲು ಹಿಂದು ಮುಂದು ನೋಡುತ್ತಾರೆ. ಆದರೂ ಪ್ರಯತ್ನ ಮಾತ್ರ ಮುಂದುವರಿಯುತ್ತಿದ್ದು, ಆತತ್ವಕ್ಕೆ ______ ಯನ್ನು ಬಿಡಬಾರದು. ಇಂಗ್ಲಿಷ್ ಪದ ಮತ್ತು ವಾಕ್ಯರಚನೆಗಳಿಗೆ ಉಚಿತವಾದ ಕನ್ನಡ ಪ್ರತಿರೂಪಗಳಿಲ್ಲದೆ ರಾಜ್ಯದ ನ್ಯಾಯಾಂಗ, ಕಾರ್ಯಾಂಗ ನಡೆಯುವುದು ಕಷ್ಟವೆಂಬ ಧನಿಯೂ ಇದೆ. ಪ್ರಚಲಿತ ರೂಢಿಯನ್ನು ಬಿಟ್ಟು, ಹೊಸ ರೂಢಿಗೆ ಹೊಂದಿಕೊಳ್ಳದಿರುವುದು ಇವರ ______ .

37. (1) ಕಲಿಕಾ ಭಾಷೆ

(2) ರೂಢಿ ಭಾಷೆ

(3) ನಾಡಿನ ಭಾಷೆ

(4) ಆಡಳಿತ ಭಾಷೆ

38. (1) ಶಿಕ್ಷಣ

(2) ಉಪದೇಶ

(3) ಬರವಣಿಗೆ

(4) ಪಾಠಪ್ರವಚನ

www.shikarat.com

39. (1) ಒತ್ತಾಯದ ನಿಲುವು

(2) ತಲೆಗೆಭಾರ

(3) ಮಾಘಸ್ನಾನ

(4) ಬೆದರಿಕೆಯಮಾತು

40. (1) ತ್ಯಾಜ್ಯವನ್ನು

(2) ನಿರಪೇಕ್ಷತೆಯನ್ನು

(3) ತಿಲಾಂಜಲಿಯನ್ನು

(4) ಉಪೇಕ್ಷೆಯನ್ನು

41. (1) ಮಲೇರಿಯಾ ಚಳಿ

(2) ಹುಸಿ ಖಾಯಿಲೆ

(3) ಮಾನಸಿಕ ಜಾಡ್ಯ

(4) ರೋಗಾತಿರೋಗ

**ಸೂಚನೆ : ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳವನ್ನು ತುಂಬಲು ನಾಲ್ಕು ರೂಪಗಳನ್ನು ನೀಡಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರುತಿಸಿ. (ಪ್ರಶ್ನೆಸಂಖ್ಯೆ 42 – 46)**

**ಉದಾ :**

"ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು" – ಈ ನಾಡಗೀತೆ ಯಾರ ರಚನೆ ?

(1) ಕುವೆಂಪು

(2) ಪುತಿನ

(3) ಬಿ.ಎಂ. ಶ್ರೀ

(4) ಹುಯಿಲಗೋಳ ನಾರಾಯಣ ರಾವ್

ಇಲ್ಲಿ ಹು. ನಾರಾಯಣ ರಾವ್ ಎಂಬುದು ಸರಿಯಾದದ್ದು. ಆದ್ದರಿಂದ (4) ನ್ನು ಗುರುತಿಸಬೇಕು.

42. 'ವಿಗಡ ವಿಕ್ರಮರಾಯ' – ಸಾಹಿತ್ಯದ ಯಾವ ಪ್ರಕಾರ

(1) ಸಣ್ಣಕತೆ

(2) ನಾಟಕ

(3) ಕಾದಂಬರಿ

(4) ವ್ಯಕ್ತಿಚಿತ್ರ

43. ಮೊದಲ 'ರಾಷ್ಟ್ರಕವಿ' ಪದವಿ ಪಡೆದ ಕವಿಯಾರು ?

(1) ಶಿವರುದ್ರಪ್ಪ

(2) ಮಾಸ್ತಿ

(3) ಗೋವಿಂದ ಪೈ

(4) ವಿ. ಕೃ. ಗೋಕಾಕ

44. ನಾಗಚಂದ್ರ ಬರೆದ ರಾಮಾಯಣದ ಹೆಸರು ಯಾವುದು

(1) ರಾಮಕಥಾಮೃತ

(2) ಶ್ರೀರಾಮಪಟ್ಟಾಭಿಷೇಕ

(3) ರಾಮಚಂದ್ರ ಚರಿತಪುರಾಣ

(4) ಭುವನೈಕ ರಾಮಾಭ್ಯುದಯ

45. ಇವುಗಳಲ್ಲಿ 'ವಾರ್ಧಕಷಟ್ಪದಿ' ಕಾವ್ಯ ಯಾವುದು

(1) ಯಶೋಧರ ಚರಿತ್ರೆ

(2) ಗಿರಿಜಾ ಕಲ್ಯಾಣ

(3) ಹರಿಶ್ಚಂದ್ರ ಕಾವ್ಯ

(4) ಪ್ರಭುಲಿಂಗ ಲೀಲೆ

46. 'ಹದಿಬದೆಯ ಧರ್ಮ' ಕೃತಿಯ ಕವಯಿತ್ರಿ ಯಾರು ?

(1) ಅಕ್ಕ ಮಹಾದೇವಿ

(2) ಸಂಚಿ ಹೊನ್ನಮ್ಮ

(3) ಅತ್ತಿಮಬ್ಬೆ

(4) ನೀಲಾಂಬಿಕೆ

www.shikarat.com

ಸೂಚನೆ : ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಸಮಾನವಾದ ಅಂಶವಿರುವ ಮೂರುಪದಗಳಿವೆ. ಭಿನ್ನವಾಗಿ ಉಳಿದಿರುವ ಪದವನ್ನು ಗುರುತಿಸಿ. (ಪ್ರಶ್ನೆಸಂಖ್ಯೆ 47 – 52)

ಉದಾ :

(1) ಚುನಾವಣೆ

(2) ಆಸ್ಪತ್ರೆ

(3) ಮುಖ್ಯಮಂತ್ರಿ

(4) ಭಾಷಣ

ಇವುಗಳಲ್ಲಿ (1), (3), (4) ರಾಜಕೀಯಕ್ಕೆ ಸಂಬಂಧಿಸಿದ ಪದಗಳು. ಭಿನ್ನರೂಪ (2) ಆಸ್ಪತ್ರೆ. ಆದ್ದರಿಂದ (2) ನ್ನು ಗುರುತಿಸಬೇಕು.

47. (1) ಅಶ್ವತ್ಥಾಮನ್
(2) ಗಂಗಾವತರಣ
(3) ಏಳುಸುತ್ತಿನ ಕೋಟೆ
(4) ಸಾವಿರಾರು ನದಿಗಳು

48. (1) ಬರುತ್ತಾನೆ
(2) ನೋಡುತ್ತಾನೆ
(3) ಹೋಗುವವನು
(4) ಸಾಯುತ್ತಾನೆ

49. (1) ಮಹಾತ್ಮ ಗಾಂಧಿ
(2) ಆರ್ಯಭಟ
(3) ವಿವೇಕಾನಂದ
(4) ರಾಧಾಕೃಷ್ಣ

50. (1) ಅದು
(2) ಇದು
(3) ಓದು
(4) ಏನು

51. (1) ವೈದೇಹಿ
(2) ಮಧುರಚೆನ್ನ
(3) ಚನ್ನವೀರ ಕಣವಿ
(4) ಮುದ್ದಣ

52. (1) ಅಕ್ಕಿ
(2) ಗೋಧಿ
(3) ಕಡಲೆ
(4) ಸಕ್ಕರೆ

ಸೂಚನೆ : ಕೆಳಗೆ ಕೊಟ್ಟ ನಾಲ್ಕು ಪದಗಳಲ್ಲಿ ಒಂದು ಮಾತ್ರ ಅನ್ಯಭಾಷಾ ಪದ, ಅದನ್ನು ಗುರುತಿಸಿ. (ಪ್ರಶ್ನೆಸಂಖ್ಯೆ 53 – 55)

ಉದಾ :

(1) ಕಿವಿ

(2) ನೇತ್ರ

(3) ಮೂಗು

(4) ನಾಲಗೆ

ಇವುಗಳಲ್ಲಿ 'ನೇತ್ರ' ಅನ್ಯಭಾಷಾ ಪದ ಉಳಿದವು ಕನ್ನಡ ಪದಗಳಾಗಿವೆ. ಆದ್ದರಿಂದ (2) ನ್ನು ಗುರುತಿಸಬೇಕು.

53. (1) ಊಟ
(2) ತಿಂಡಿ
(3) ಅಂಬಲಿ
(4) ಥಾಲಿ

54. (1) ಎಣ್ಣೆ
(2) ಬತ್ತಿ
(3) ಹಣತೆ
(4) ಲಾಂದ್ರ

55. (1) ಧನ
(2) ದನ
(3) ಎಮ್ಮೆ
(4) ಕೊಟ್ಟಿಗೆ



www.shikarat.com

ಸೂಚನೆ : ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಒಂದು ಮಾತ್ರ ಅಚ್ಚ ಕನ್ನಡ ಪದ. ಉಳಿದ ಮೂರು ಅನ್ಯ ಭಾಷಾ ಪದಗಳು. ಕನ್ನಡ ಪದವನ್ನು ಗುರುತಿಸಿ.
**(ಪ್ರಶ್ನೆಸಂಖ್ಯೆ 56 ಮತ್ತು 57)**

ಉದಾ :

(1) ರೈಲು

(2) ಬೆರಳು

(3) ಕುಮಾರ

(4) ಸಂಜೆ

ಇಲ್ಲಿ ಬೆರಳು (2) ಎನ್ನುವುದು ಕನ್ನಡ. (2) ನ್ನು ಗುರುತಿಸಿ.

**56.** (1) ಅರಸು

(2) ಸಿಮೆಂಟು

(3) ಕಚೇರಿ

(4) ತಾಲೀಮು

**57.** (1) ಬ್ರಹ್ಮ

(2) ವನ

(3) ಮೇಷ್ಟ್ರು

(4) ಊರು

ಸೂಚನೆ : ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನು ಅವುಗಳಿಗೆ ಅರ್ಥಗಳನ್ನೂ ಕೊಟ್ಟಿದೆ. ನುಡಿಗಟ್ಟಿನ ಸರಿಯಾದ ಅರ್ಥ ಯಾವುದೆಂದು ಗುರುತಿಸಿ.
**(ಪ್ರಶ್ನೆಸಂಖ್ಯೆ 58 – 61)**

ಉದಾ : ಕಟ್ಟುಕತೆ

(1) ಸುಳ್ಳುಕತೆ

(2) ಊಹಿಸಿದಕತೆ

(3) ಕಟ್ಟಿದಕತೆ

(4) ಇಲ್ಲದಿರುವುದರ ಸೃಷ್ಟಿಕತೆ

ಇವುಗಳಲ್ಲಿ (2) ಸರಿಯಾದ ಅರ್ಥವಾಗಿದೆ. ಆದ್ದರಿಂದ (2) ನ್ನು ಗುರುತಿಸಿ.

**58.** ವಿಷಕಾರು

(1) ಕೆಟ್ಟದ್ದನ್ನುಮಾಡು

(2) ನಿಂದಿಸು

(3) ದ್ವೇಷಿಸು

(4) ವಿಷವನ್ನು ಉಗುಳು

**59.** ತಲೆಬಾಗು

(1) ತಲೆತಗ್ಗಿಸು

(2) ನಮಸ್ಕರಿಸು

(3) ವಿಧೇಯನಾಗು

(4) ನಾಚಿಕೆ ತೋರಿಸು

**60.** ಕಾಕ ದೃಷ್ಟಿ

(1) ಕಾಗೆ ದೃಷ್ಟಿ

(2) ವಕ್ರ ದೃಷ್ಟಿ

(3) ನೆಟ್ಟ ದೃಷ್ಟಿ

(4) ಕೋಪ ದೃಷ್ಟಿ

**61.** ಹಿತ್ತಾಳೆ ಕಿವಿ

(1) ಸ್ವಂತ ವಿವೇಚನೆ ಇಲ್ಲದ

(2) ಚಾಡಿ ಮಾತಿಗೆ ಬೆಲೆ ಕೊಡುವುದು

(3) ಹಳದಿ ಬಣ್ಣದ ಕಿವಿ

(4) ಹಿತ್ತಾಳೆ ಒಡವೆ ಕಿವಿ

www.shikarat.com

ಸೂಚನೆ : ಕೆಳಗೆ ಕೊಟ್ಟಿರುವ ಪದಗಳಿಗೆ ವಿರುದ್ಧಾರ್ಥಕವಾದ ಶಬ್ದಗಳನ್ನು ಗುರುತಿಸಿ. (ಪ್ರಶ್ನೆಸಂಖ್ಯೆ 62 – 66)

ಉದಾ : ಅಂತರ್ವಾಣಿ

(1) ಹೊರವಾಣಿ

(2) ದುರ್ವಾಣಿ

(3) ಬಹಿರ್ವಾಣಿ

(4) ಒಳಗಿನವಾಣಿ

ಇಲ್ಲಿ (3) 'ಬಹಿರ್ವಾಣಿ' ಸರಿಯಾದ ಉತ್ತರ. ಆದ್ದರಿಂದ (3) ಎಂದು ಗುರುತಿಸಿ.

62. ದುರ್ದೈವ

(1) ದೈವ

(2) ಸುದೈವ

(3) ಅದೈವ

(4) ನಿರ್ದೈವ

63. ಸಂಯೋಗ

(1) ಸವಿಯೋಗ

(2) ವಿಯೋಗ

(3) ಆಯೋಗ

(4) ಅನುಯೋಗ

64. ಕೃತಜ್ಞ

(1) ಕ್ರುತಜ್ಞ

(2) ಕೃತಜ್ಞ

(3) ಸುಕೃತಜ್ಞ

(4) ಕೃತಘ್ನ

65. ಸಾಮಾನ್ಯತೆ

(1) ಅಸಮಾನ್ಯತೆ

(2) ಅಸಫಲತೆ

(3) ಸಹಜತೆ

(4) ಅರಸಿಕತೆ

66. ಪ್ರಾಚೀನ

(1) ಅಪ್ರಾಚೀನ

(2) ನಿರ್ವಾಚೀನ

(3) ಅರ್ವಾಚೀನ

(4) ಅಪ್ರಚೀನ

ಸೂಚನೆ : ಈ ಶಬ್ದಗಳಿಗೆ ಸಮಾನಾರ್ಥಕವಾದ, ಅತಿ ಸಮಿಪದ ಅರ್ಥವುಳ್ಳ ರೂಪವನ್ನು ಗುರಿತಿಸಿ. (ಪ್ರಶ್ನೆಸಂಖ್ಯೆ 67 – 71)

ಉದಾ : 'ಕಂಗದಿರ' – ಎಂದರೆ

(1) ನಕ್ಷತ್ರ

(2) ಧೂಮಕೇತು

(3) ಚಂದ್ರ

(4) ಸೂರ್ಯ

ಇವುಗಳಲ್ಲಿ ಸೂರ್ಯ (4) ಸರಿಯಾದ ಅರ್ಥ ಹೇಳುವುದರಿಂದ (4) ನ್ನು ಗುರುತಿಸಬೇಕು.

67. 'ವೈಜ್ಞಾನಿಕ' – ಎಂದರೆ

(1) ವಿಶೇಷಜ್ಞಾನವುಳ್ಳ

(2) ವಿಚಾರಶೀಲವುಳ್ಳ

(3) ವಿಜ್ಞಾನಕ್ಕೆ ಸಂಬಂಧಿಸಿದ

(4) ಶಾಸ್ತ್ರಗಳನ್ನು ಹೀಗಳಿಯುವ

68. 'ಹರಿ' – ಎಂಬುದರ ಅರ್ಥ

(1) ಪ್ರವಹಿಸು

(2) ಚೂರು ಮಾಡು

(3) ಓಡಾಡು

(4) ಸ್ವೇಚ್ಛೆ

www.shikarat.com

69. 'ಸಹೃದಯ'

(1) ಸಮಾನ ಮನಸ್ಸುಳ್ಳ

(2) ಕರುಣಾಮಯ

(3) ಒಳ್ಳೆಯ ಭಾವನೆ

(4) ಪ್ರೀತಿಯ ಮನಸ್ಸು

70. 'ಚದುರ' – ಎಂದರೆ

(1) ಸೊಗಸುಗಾರ

(2) ಬುದ್ಧಿವಂತ

(3) ಜಾಣ

(4) ಚೆಲುವ

71. 'ಮಹಲು' – ಎಂದರೆ

(1) ಉಪ್ಪರಿಗೆ

(2) ಸೌಧ

(3) ಅರಮನೆ

(4) ಮಹಡಿ

**ಸೂಚನೆ : ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಮೂರು ಭಾಗಗಳಾಗಿ ವಿಭಜಿಸಿ ಪ್ರತಿಭಾಗದ ಕೆಳಗೆ ಗೆರೆ ಎಳೆಯಲಾಗಿದೆ. ಅವುಗಳಿಗೆ (1), (2) ಮತ್ತು (3) ಎಂಬ ಸಂಕೇತಗಳನ್ನು ಕೊಡಲಾಗಿದೆ. (4) ನೆಯದನ್ನು ತಪ್ಪಿಲ್ಲ ಎಂದು ಕರೆದು (4) ಎಂಬ ಸಂಕೇತ ಕೊಡಲಾಗಿದೆ. ಈಗ ತಪ್ಪಾದ ಭಾಗವನ್ನು ಗುರುತಿಸಿರಿ. ತಪ್ಪಿಲ್ಲ ದಿದ್ದರೆ (4) ನೇ ಸಂಕೇತವನ್ನು ಗುರುತಿಸಿರಿ. (ಪ್ರಶ್ನೆಸಂಖ್ಯೆ 72 – 76)**

**ಉದಾ :**

ಜೀವಸೃಷ್ಟಿಗೆ (1) ಪ್ರಕೃತಿ ಕಾರಣವಾದಂತೆ (2)

ಜೀವನಾಶಕ್ಕೂ ಪ್ರಕೃತಿ ಕಾರಣವಾಗುತ್ತದೆ. (3)

ತಪ್ಪಿಲ್ಲ. (4)

ಇದರ (3) ನೇ ಭಾಗದಲ್ಲಿ ಪುನರಾವರ್ತನೆಯಾಗಿರುವ ಪ್ರಕೃತಿ ಪದ ತಪ್ಪು ಆದ್ದರಿಂದ (3) ತಪ್ಪೆಂದು ಭಾವಿಸಿ ಗುರುತಿಸಬಹುದು.

72. ನಾಳೆ (1) ಮಳೆ ಬರುತ್ತದೆಂದು (2)

ಜೋಯಿಸರು ಹೇಳಿದರು. (3) ತಪ್ಪಿಲ್ಲ. (4)

73. ಮಳೆಬಿದ್ದಕಡೆ, (1) ಹುಲ್ಲು (2) ಬೆಳೆಯುತ್ತದೆ. (3) ತಪ್ಪಿಲ್ಲ. (4)

74. ಸೂರ್ಯ (1) ಉದಯಿಸಲು, (2) ಕೆರೆಯ ತಾವರೆ ಅರಳಿತು. (3)

ತಪ್ಪಿಲ್ಲ. (4)

75. ಬೇಸಿಗೆಯ ಬಿಸಿಲಿನಿಂದ, (1) ಹಿಮಗಾಲದ, (2)

ಮಂಜುಕರಗಿತು. (3) ತಪ್ಪಿಲ್ಲ. (4)

76. ಹಿರಿಯರ ಮಾತನ್ನು, (1) ಕೇಳುವ ಮನುಷ್ಯನು, (2)

ಮುಂದೆ ಬರುವನು. (3) ತಪ್ಪಿಲ್ಲ. (4)

**ಸೂಚನೆ : ಕೆಳಗಿನ ವಾಕ್ಯಗಳಲ್ಲಿ ಗೆರೆಯಿಂದ ಸೂಚಿಸಿದ ಭಾಗದಲ್ಲಿ ದೋಷವಿದ್ದರೆ, ಮುಂದೆ ಕೊಡಲಾದ ಮೂರು ರೂಪಗಳಲ್ಲಿ ಸರಿಯಾದುದನ್ನು ಗುರುತಿಸಿರಿ. ದೋಷ ವಿಲ್ಲದಿದ್ದರೆ 'ಸರಿಯಾಗಿದೆ' ಎಂಬುದನ್ನು ಗುರಿತಿಸಿ. (ಪ್ರಶ್ನೆಸಂಖ್ಯೆ 77 – 81)**

**ಉದಾ :** ಯೋಧರು ಶಿರಸ್ತ್ರಾಣವನ್ನು ಧರಿಸುವುದು ಉಚಿತ.

(1) ಶಿರಸ್ತ್ರಾಣ

(2) ಸಿರಸ್ತ್ರಾಣ

(3) ಶಿರಶ್ತ್ರಾಣ

(4) ಸರಿಯಾಗಿದೆ

ಇಲ್ಲಿ (4) ಸರಿಯಾಗಿದೆ ಆದ್ದರಿಂದ (4) ನ್ನು ಗುರುತಿಸಿರಿ.

www.shikarat.com

77. ಆಸ್ಪತ್ರೆಯ <u>ಪಾರ್ಶ್ವದಲ್ಲಿ</u> ಶಾಲೆಯೊಂದು ಬಂದಿತು.

(1) ಪಾರ್ಶದಲ್ಲಿ
(2) ಪಾರ್ಶ್ವದಲ್ಲಿ
(3) ಪಾರ್ಸ್ವದಲ್ಲಿ
(4) ಸರಿಯಾಗಿದೆ

78. <u>ಗಂದರ್ವ</u> ರೆಂದರೆ ದೇವತೆಗಳ ಒಂದು ವರ್ಗ.

(1) ಗಾಂಧರ್ವ
(2) ಗಂಧರ್ವ
(3) ಗಾಂದರ್ವ
(4) ಸರಿಯಾಗಿದೆ

79. <u>'ನಗರಿಕರಣ'</u>ಕ್ಕೂ ಕೈಗಾರಿಕಿಕರಣಕ್ಕೂ ನಿಕಟ ಸಂಬಂಧವಿದೆ.

(1) ನಾಗರಿಕಾರಣ
(2) ನಾಗರೀಕರಣ
(3) ನಗರೀಕರಣ
(4) ಸರಿಯಾಗಿದೆ

80. <u>'ರುಜುವಾತು'</u> ಇಲ್ಲದೆ ಯಾವ ಕಾರ್ಯಸಾಧನೆಯೂ ಆಗದು.

(1) ಋಜುವಾತು
(2) ರುಜುಮಾತು
(3) ರೂಜುವಾತು
(4) ಸರಿಯಾಗಿದೆ

81. ಇಂಥದೊಂದು ಅವಸ್ಥೆ ಸಮಾಜ <u>ವ್ಯವಸ್ಥೆಯ</u> ಸೂಚಿ.

(1) ವ್ಯವಸ್ಥೆ
(2) ವೆವಸ್ಥೆ
(3) ಯೆವಸ್ತೆ
(4) ಸರಿಯಾಗಿದೆ

**ಸೂಚನೆ : ಕೆಳಗೆ ಕೊಟ್ಟಿರುವ ಪದಗಳನ್ನು ಸುಧಾರಿಸಿ. ಸುಧಾರಣೆ ಇಲ್ಲದಿದ್ದರೆ 'ಸುಧಾರಣೆ ಇಲ್ಲ' ಎಂದು ಗುರುತಿಸಿ. (ಪ್ರಶ್ನೆಸಂಖ್ಯೆ 82 – 86)**

82. <u>ಶಿಲೀಂದ್ರ</u>

(1) ಸಿಲೀಂದ್ರ
(2) ಶಿಲಿಂದ್ರ
(3) ಷಿಲೀಂದ್ರ
(4) ಸುಧಾರಣೆ ಇಲ್ಲ

83. <u>ಜಾತ್ಯತೀತ</u>

(1) ಜಾತ್ಯತೀತ
(2) ಜಾತ್ಯಾತಿತ
(3) ಜತ್ಯಾತೀತ
(4) ಸುಧಾರಣೆ ಇಲ್ಲ

84. <u>ಯಶಶ್ಚಂದ್ರಿಕೆ</u>

(1) ಯಶಸ್ಚಂದ್ರಿಕೆ
(2) ಯಶಚಂದ್ರಿಕೆ
(3) ಯಸಶ್ಚಂದ್ರಿಕೆ
(4) ಸುಧಾರಣೆ ಇಲ್ಲ

85. <u>ಕೀರ್ತಿಶೇಷ</u>

(1) ಕೀರ್ತಿಷೇಶ
(2) ಕೀರ್ತಿಸೇಷ
(3) ಕೀರ್ತಿಶೇಸ
(4) ಸುಧಾರಣೆ ಇಲ್ಲ

86. <u>ಅಂಜಿನೇಯ</u>

(1) ಆಂಜನೇಯ
(2) ಅಂಜನೇಯ
(3) ಆಂಜನೀಯ
(4) ಸುಧಾರಣೆ ಇಲ್ಲ

www.shikarat.com

ಸೂಚನೆ : ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿದಿ.
(ಪ್ರಶ್ನೆಸಂಖ್ಯೆ 87 – 91)

ಉದಾ :

ನಾನು ಈಗ ಬಂದೆನು. – ಇಲ್ಲಿ 'ನಾನು' ಎಂಬುದು.

(1) ಅಂಕಿತನಾಮ

(2) ರೂಢನಾಮ

(3) ಭಾವನಾಮ

(4) ಸರ್ವನಾಮ

ಇಲ್ಲಿ ಸರ್ವನಾಮ ಎಂಬುದು ಸರಿಯಾದ ಉತ್ತರ. ಆದ್ದರಿಂದ (4) ನ್ನು ಗುರುತಿಸಬೇಕು.

87. ಬಂಡೆಗಲ್ಲು – ಎಂಬುದು

(1) ಆಗಮ ಸಂಧಿ

(2) ಆದೇಶ ಸಂಧಿ

(3) ಗುಣ ಸಂಧಿ

(4) ಯಾವುದೂ ಸರಿಯಿಲ್ಲ

88. 'ಮಳೆಯಲ್ಲಿ' – ಎಂಬುದು

(1) ಸಂಬೋಧನಾ ವಿಭಕ್ತಿ

(2) ಚತುರ್ಥೀ ವಿಭಕ್ತಿ

(3) ಸಪ್ತಮಿ ವಿಭಕ್ತಿ

(4) ತೃತೀಯ ವಿಭಕ್ತಿ

89. 'ತುದಿನಾಲಗೆ' – ಎಂಬುದು

(1) ತತ್ಪುರುಷ ಸಮಾಸ

(2) ಗಮಕ ಸಮಾಸ

(3) ಕರ್ಮಧಾರಯ ಸಮಾಸ

(4) ಅಂಶಿ ಸಮಾಸ

90. 'ಪರ್ವತ' – ಎಂಬುದು

(1) ರೂಢನಾಮ

(2) ಅನ್ವರ್ಥನಾಮ

(3) ಸರ್ವನಾಮ

(4) ಅಂಕಿತನಾಮ

91. 'ಮರದಿಂದ ಹಣ್ಣುಬಿದ್ದಿತು' – ಈ ವಾಕ್ಯದಲ್ಲಿ ಮರದಿಂದ ಎಂಬುದು.

(1) ತೃತೀಯ ವಿಭಕ್ತಿ

(2) ಪಂಚಮಿ ವಿಭಕ್ತಿ

(3) ಷಷ್ಠಿ ವಿಭಕ್ತಿ

(4) ಪ್ರಥಮ ವಿಭಕ್ತಿ

ಸೂಚನೆ : ಕೆಳಗೆ ಖಾಲಿಯ ಸ್ಥಾನವನ್ನು ಸೂಕ್ತ ಉತ್ತರದಿಂದ ತುಂಬಿರಿ. (ಪ್ರಶ್ನೆಸಂಖ್ಯೆ 92 – 96)

92. 'ಚಂದ್ರೋದಯ' ಎಂಬುದು ______

(1) ವೃದ್ಧಿ ಸಂಧಿ

(2) ಯಣ್ ಸಂಧಿ

(3) ಗುಣ ಸಂಧಿ

(4) ಸವರ್ಣ ದೀರ್ಘ ಸಂಧಿ

93. 'ಕೈತಪ್ಪು' ಎಂಬುದು ______

(1) ಲೋಪ ಸಂಧಿ

(2) ಆದೇಶ ಸಂಧಿ

(3) ಸಂಧಿ ಕಾರ್ಯ ಇಲ್ಲ

(4) ಆಗಮ ಸಂಧಿ

www.shikarat.com

94. 'ಸಂದೋನ್' – ಈ ಕ್ರಿಯಾ ರೂಪ ಯಾವ ಕನ್ನಡದಲ್ಲಿ ಬಳಕೆ ಯಾಗಿತ್ತು.

(1) ನಡುಗನ್ನಡ

(2) ಪೂರ್ವ ಹಳಗನ್ನಡ

(3) ಹಳಗನ್ನಡ

(4) ಹೊಸಗನ್ನಡ

95. 'ಪಂಚೇಂದ್ರಿಯ' ಎಂಬುದು ______

(1) ದ್ವಂದ್ವ ಸಮಾಸ

(2) ಅಂಶಿ ಸಮಾಸ

(3) ದ್ವಿಗು ಸಮಾಸ

(4) ಬಹುವ್ರೀಹಿ ಸಮಾಸ

96. 'ಸುಮ್ಮನೆ' ಎಂಬುದು ______

(1) ಸಾಮಾನ್ಯ ಅವ್ಯಯ

(2) ಅನುಕರಣ ಅವ್ಯಯ

(3) ನಿಪಾತ ಅವ್ಯಯ

(4) ಅವಧಾರಣ ಅವ್ಯಯ

ಸೂಚನೆ : ಕೆಳಗಿನ ಪ್ರಶ್ನೆಗಳಿಗೆ ಸಂಖ್ಯೆಗಳಿಂದ ಗುರುತಿಸಿರಿ. (ಪ್ರಶ್ನೆಸಂಖ್ಯೆ 97 – 100)

ಉದಾ :

'ಹಚ್ಚೇವು ಕನ್ನಡದ ದೀಪ' – ಈ ಗೀತೆಯ ರಚನೆ ಯಾರದು ?

(1) ಕರ್ಕಿ

(2) ಕುವೆಂಪು

(3) ಕಾವ್ಯಾನಂದ

(4) ರಾಜರತ್ನಂ

ಈ ಗೀತ ರಚಕರು (1) ಕರ್ಕಿಯವರು. ಆದ್ದರಿಂದ (1) ನ್ನು ಗುರುತಿಸಿರಿ.

97. 'ಕಾವ್ಯಾರ್ಥ ಪದಕೋಶ' – ಕೃತಿಯ ಕರ್ತೃ

(1) ರಂ. ಶ್ರೀ ಮುಗಳಿ

(2) ಜಿ.ಎಸ್. ಶಿವರುದ್ರಪ್ಪ

(3) ವಿ.ಎಲ್. ಇನಾಂದಾರ್

(4) ಟಿ.ವಿ. ವೆಂಕಟಾಚಲ ಶಾಸ್ತ್ರಿ

98. 'ಟಿಂಗರಬುಡ್ಡಣ್ಣ' – ಈ ನಾಟಕ ಯಾರದು ?

(1) ಪರ್ವತವಾಣಿ

(2) ಚಂದ್ರಶೇಖರ ಕಂಬಾರ

(3) ಚಂದ್ರಶೇಖರ ಪಾಟೀಲ

(4) ಬರಗೂರು ರಾಮಚಂದ್ರಪ್ಪ

99. 'ಮಾನವ ಜನ್ಮ ದೊಡ್ಡದು' – ಯಾವ ದಾಸರ ಕೀರ್ತನೆಯ ಸಾಲು

(1) ಪುರಂಧರದಾಸರು

(2) ಕನಕದಾಸರು

(3) ವಿಜಯದಾಸರು

(4) ಮೋಹನದಾಸರು

100. 'ಸಂಜೆ ಐದರಮಳೆ' ಕವನ ಸಂಕಲನ ಯಾರದು ?

(1) ಎಚ್.ಎಸ್. ಶಿವಪ್ರಕಾಶ್

(2) ನಿಸಾರ್ ಅಹಮದ್

(3) ಗೋಪಾಲ ಕೃಷ್ಣ ಅಡಿಗ

(4) ಚನ್ನವೀರ ಕಣವಿ

www.shikarat.com